ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಭೂಸ್ವಾಧೀನ ಅಧಿಕ ಮೇಲ್ಮನವಿ ಪ್ರಾಧಿಕಾರವನ್ನು ರದ್ದುಗೊಳಿಸುವುದು

೨೧೬೫ ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಕಂದಾಯ ಹಾಗೂ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ಜಿಲ್ಲಾ ಸಾಗರ ಉಪ ವಿಭಾಗದಲ್ಲಿರುವ ಭೂ ಸ್ವಾಧೀನ ಅಧಿಕ ಮೇಲ್ಮನವಿ ಪ್ರಾಧಿಕಾರವನ್ನು ರದ್ದುಗೊಳಿಸಲಾಗುವುದು ನಿಜವೇ?

ಆ) ಹಾಗಿದ್ದಲ್ಲಿ ಸಾಗರ ಭೂಸ್ವಾಧೀನ ಅಧಿಕ ಮೇಲ್ಮನವಿ ಪ್ರಾಧಿಕಾರದಲ್ಲಿರುವ ಮೊಕದ್ದಮೆಗಳು ಎಷ್ಟು

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು).—

ಅ) ಇಲ್ಲ.

ಆ) ೫೭೧.

ಬೀಡಿ ಗುತ್ತಿಗೆದಾರರನ್ನು ಕಾರ್ಮಿಕರೆಂದು ಪರಿಗಣಿಸುವುದು:

೨೧೬೦ ಶ್ರೀ ಕೆ ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀಡಿ ಗುತ್ತಿಗೆದಾರರ ಸಮಸ್ಯೆಯ ಬಗ್ಗೆ ಸರ್ಕಾರದವರ ನಿಲುವೇನು?

ಆ) ಬೀಡಿ ಗುತ್ತಿಗೆದಾರರನ್ನು ಕಾರ್ಮಿಕರೆಂದು ಸರ್ಕಾರವು ಪರಿಗಣಿಸಿದೆಯೇ?

ಇ) ಬೀಡಿ ಗುತ್ತಿಗೆ ಪದ್ಧತಿ ರದ್ದುದಲ್ಲಿ ಅವರ ಮುಂದಿನ ಜೀವನ ಬಗ್ಗೆ ಸರ್ಕಾರದ ನಿಲುವೇನು

ಈ) ಈ ಹಿಂದೆ ನಡೆದ ಬೀಡಿ ಗುತ್ತಿಗೆದಾರರ ಮಹಾ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳ ಬಗ್ಗೆ ಸರ್ಕಾರವು ತಳೆದ ನಿಲುವೇನು?

ಉ) ಮಾನ್ಯ ಸಚಿವರು ಬೀಡಿ ಕಾರ್ಮಿಕರ ಸಮ್ಮೇಳನದ ಸಂದರ್ಭದಲ್ಲಿ ಬೀಡಿ ಗುತ್ತಿಗೆದಾರರಿಗೆ ನೀಡಿದ ಭರವಸೆಗಳನ್ನು ಯಾವಾಗ ಈಡೇರಿಸಲಾಗುವುದು?

ಶ್ರೀ ಎಸ್. ಕೆ. ಕಾಂತ (ಕಾರ್ಮಿಕ ಸಚಿವರು).—

ಅ) ಬೀಡಿ ಉದ್ಯಮದಲ್ಲಿ ಗುತ್ತಿಗೆ ಕಾರ್ಮಿಕರ ಪದ್ಧತಿಯನ್ನು ರದ್ದುಗೊಳಿಸುವ ವಿಷಯವು ಸಲಹಾ ಮಂಡಳಿಯ ಪರಿಶೀಲನೆಯಲ್ಲಿದೆ.

ಆ) ಇಲ್ಲ.

ಇ) ಈ ಸಲಹಾ ಮಂಡಳಿಯ ವರದಿ ಸರ್ಕಾರಕ್ಕೆ ಬಂದ ಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಆ ಬೇಡಿಕೆಗಳು ಅವರ ಮುಖ್ಯ ನಿಯೋಜಕರಿಗೆ ಸಂಬಂಧಪಟ್ಟವುಗಳು

ಉ) ಕಾರ್ಮಿಕರೆಂದು ಪರಿಗಣಿಸಲ್ಪಟ್ಟರೆ ಮಾತ್ರ ಅವರ ಬೇಡಿಕೆಗಳ ಬಗ್ಗೆ ಪರಿಶೀಲಿಸಲಾಗುತ್ತದೆ